ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:21.03.2019 ರಂದು ಅಪರಾಹ್ನ:04:30 ಗಂಟೆಗೆ ಗ್ರಾಅಪ ಇಲಾಖೆಯ ಸಭಾ ಕೊಠಡಿಯಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸುವ ಬಗ್ಗೆ ಜರುಗಿದ ಸಭೆಯ ನಡವಳಿಗಳು

ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು: (ಶ್ರೀ/ಶ್ರೀಮತಿ)

1. ಎಲ್.ಕೆ.ಅತೀಕ್, ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು
2. ಎಂ.ಕೆ.ಕೆಂಪೇಗೌಡ, ನಿರ್ದೇಶಕರು, ಪಂ.ರಾಜ್-1, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
3. ಎಸ್.ಎಂ.ಜುಲ್‌ಫಿಖಾರ್‌ಉಲ್ಲಾ, ನಿರ್ದೇಶಕರು (ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
4. ಡಿ.ಕೆ. ಪ್ರಭುರಾಜ್, ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, (KSRSAC), ಬೆಂಗಳೂರು.
5. ಡಾ॥ ಸಿ.ಸಿದ್ಧರಾಮಯ್ಯ, ಉಪಕಾರ್ಯದರ್ಶಿ, ಬೆಂಗಳೂರು ನಗರ, ಜಿಲ್ಲಾ ಪಂಚಾಯತ್.
6. ಪಿ.ಎಸ್.ಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
7. ಸಮರ್ಥರಾಮ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
8. ಪ್ರಶಾಂತ್, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
9. ಗಗನ್.ಎ.ಎಸ್, ಸಹಾಯಕ ನಿರ್ದೇಶಕರು (ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
10. ವಿದ್ಯಾ.ವಿ.ಸಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಚಿಕ್ಕಬಾಣಾವರ ಗ್ರಾಮ ಪಂಚಾಯತ್, ಬೆಂಗಳೂರು ಉತ್ತರ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್.
11. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು, (ಇ-ಪಂಚಾಯತ್), ಗ್ರಾಅಪ ಇಲಾಖೆ.
12. ಅಮೃತವರ್ಷಿಣಿ, ತಾಂತ್ರಿಕ ಸಮಾಲೋಚಕರು, (ಇ-ಪಂಚಾಯತ್), ಗ್ರಾಅಪ ಇಲಾಖೆ.
13. ನಿತಿನ್ ನಾಯ್ಕ್, ಪ್ರೋಗ್ರಾಮರ್, ಎನ್.ಐ.ಸಿ, ಬೆಂಗಳೂರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ ಇವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ನಿರ್ದೇಶಕರು (ಇ-ಆಡಳಿತ)(ಪ್ರ) ರವರು ಸ್ವಾಗತಿಸಿದರು ಹಾಗೂ ಸಭೆಯ ಕಾರ್ಯಸೂಚಿಗಳ ಬಗ್ಗೆ ವಿವರಿಸಿದರು.

ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸಲು ತೆರಿಗೆ ವ್ಯಾಪ್ತಿಯ ಹೊರಗೆ ಉಳಿದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಬೇಕೆಂದು 2019-20 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ. ಅದರಂತೆ ಗ್ರಾಮ ಪಂಚಾಯತ್ ಗಳಲ್ಲಿ ತೆರಿಗೆ ವ್ಯಾಪ್ತಿಯಿಂದ ಹೊರಗೆ ಉಳಿದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲು ಮತ್ತು ಆಸ್ತಿಗಳ ದಾಖಲೀಕರಣವನ್ನು ಕರಾರುವಕ್ಕಾಗಿ ಗುರುತಿಸುವ ಸಲುವಾಗಿ ಆಸ್ತಿಗಳನ್ನು ಡಿಜಿಟಲೀಕರಣ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಈಗಾಗಲೇ ಈ ಸಂಬಂಧ ಚಿಕ್ಕಬಾಣಾವರ ಗ್ರಾ.ಪಂ, ಬೆಂಗಳೂರು ಉತ್ತರ, ಬೆಂಗಳೂರು ನಗರ ಜಿಲ್ಲೆ pilot ಮಾದರಿಯಲ್ಲಿ ಸದರಿ ಯೋಜನೆಯನ್ನು ಅನುಷ್ಠಾಗೊಳಿಸಲಾಗುತ್ತಿದೆ ಹಾಗೂ ಸದರಿ ಯೋಜನೆಯ ಅನುಷ್ಠಾನಕ್ಕೆ ಬೇಕಾದ Mobile app ಅನ್ನು ವಿನ್ಯಾಸಗೊಳಿಸಿ KSRSAC ಮೂಲಕ ಗ್ರಾಮ ಪಂಚಾಯತ್‌ನ Revenue map ಗಳನ್ನು ಪಡೆದುಕೊಂಡು ಆಸ್ತಿಗಳ polygon ಅನ್ನು ರಚಿಸಿ ಆಸ್ತಿಗಳ ಡಿಜಿಟಲೀಕರಣಗೊಳಿಸಲಾಗುತ್ತಿದೆ ಎಂದು ಸಭೆಯ ಗಮನಕ್ಕೆ ತರಲಾಯಿತು.

.....2

ಎಲ್ಲಾ ಅಂಶಗಳನ್ನು ಪರಿಗಣಿಸಿ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಈ ಕೆಳಕಂಡ ತೀರ್ಮಾನ ತೆಗದುಕೊಳ್ಳಲಾಯಿತು.

1. Pilot ಯೋಜನೆಯನ್ನು ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನ ಮಾಡುವುದು.

   **ಕ್ರಮ: ನಿರ್ದೇಶಕರು, ಪಂ.ರಾಜ್-1.**

2. ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ Revenue map ಗಳನ್ನು KSRSAC ಮೂಲಕ ಪಡೆಯುವುದು.

   **ಕ್ರಮ: ನಿರ್ದೇಶಕರು, KSRSAC**

3. KSRSAC ನವರು ಆಸ್ತಿಗಳ ಡಿಜಿಟಲೀಕರಣಕ್ಕಾಗಿ ಆಸ್ತಿಗಳ polygon ಅನ್ನು ರಚಿಸಿ ಗ್ರಾಮ ಪಂಚಾಯತ್ ರವರಿಗೆ ನೀಡುವುದು ಹಾಗೂ ಸದರಿ polygon ಸಹಾಯದೊಂದಿಗೆ ಆಸ್ತಿಗಳನ್ನು ವಿಭಾಗಿಸಿದ ನಂತರ polygon ಅನ್ನು ಅಂತಿಮಗೊಳಿಸುವುದು.

   **ಕ್ರಮ: ನಿರ್ದೇಶಕರು, KSRSAC**

4. ತೆರಿಗೆ ವ್ಯಾಪ್ತಿಯ ಹೊರಗೆ ಉಳಿದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲು ಪಂಚತಂತ್ರದ ಎಲ್ಲಾ ಆಸ್ತಿಗಳನ್ನು ಇ-ಸ್ವತ್ತು ತಂತ್ರಾಂಶಕ್ಕೆ ತರಲು ಬೇಕಾದ ದಾಖಲೆಗಳನ್ನು ಸಾರ್ವಜನಿಕರಿಂದ ಸಂಗ್ರಹಿಸುವುದು.

   **ಕ್ರಮ: ನಿರ್ದೇಶಕರು, ಪಂ.ರಾಜ್-1.**

5. ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ಆಸ್ತಿಗಳ ಡಿಜಿಟಲೀಕರಣ ಮಾಡಲು ಬೇಕಾದ TAB ಗಳನ್ನು ಪ್ರತಿ ಗ್ರಾಮ ಪಂಚಾಯತ್‌ಗಳಿಗೆ 8 ರಂತೆ 250 TAB ಗಳನ್ನು ಖರೀದಿಸಲು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆರವರಿಗೆ ಹಣ ಬಿಡುಗಡೆ ಮಾಡಲು ಕ್ರಮವಹಿಸುವುದು.

   **ಕ್ರಮ: ನಿರ್ದೇಶಕರು, ಇ-ಆಡಳಿತ.**

6. ಗ್ರಾಮ ಪಂಚಾಯತ್‌ಗಳಲ್ಲಿ ಆಸ್ತಿಗಳ ಡಿಜಿಟಲೀಕರಣ ಮಾಡಲು NGO ಸಂಸ್ಥೆಗಳಿಂದ ಸೇವೆಯನ್ನು ಪಡೆಯುವುದು. ಪ್ರತಿ ಗ್ರಾಮ ಪಂಚಾಯತ್‌ಗೆ 8 ತಂಡಗಳನ್ನು ರಚಿಸಿ, ಪ್ರತಿ ತಂಡಕ್ಕೆ ಗ್ರಾಮ ಪಂಚಾಯತ್‌ನ ಒಬ್ಬರು/ಇಬ್ಬರು ನೌಕರರನ್ನು ನೇಮಕ ಮಾಡುವುದು.

   **ಕ್ರಮ: ನಿರ್ದೇಶಕರು, ಪಂ.ರಾಜ್-1.**

7. ಸದರಿ ಯೋಜನೆಯನ್ನು ಬೆಂಗಳೂರು ನಗರ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನ ಮಾಡಲು ಉಪಕಾರ್ಯದರ್ಶಿರವರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸುವುದು.

8. ಯೋಜನೆಯನ್ನು ಬೆಂಗಳೂರು ನಗರದ ಎಲ್ಲಾ ಗ್ರಾಮ ಪಂಚಯತ್‌ಗಳಲ್ಲಿ ಅನುಷ್ಠಾನ ಮಾಡಲು Road map ಅನ್ನು ತಯಾರಿಸುವುದು.

   **ಕ್ರಮ: ನಿರ್ದೇಶಕರು, ಪಂ.ರಾಜ್-1. ಉಪಕಾರ್ಯದರ್ಶಿ, ಬೆಂಗಳೂರು ನಗರ**

9. ಯೋಜನೆಯ Process documentation ಅನ್ನು ತಯಾರಿಸುವುದು.

   **ಕ್ರಮ: ನಿರ್ದೇಶಕರು, ಪಂ.ರಾಜ್-1. ಉಪಕಾರ್ಯದರ್ಶಿ, ಬೆಂಗಳೂರು** ನಗರ

10. Revenue map ನ್ನು ತಯಾರಿಸಲು KSRSAC ರವರಿಗೆ payment ಮಾಡಬೇಕಾಗಿರುತ್ತದೆ. ಅದರಂತೆ, ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಪಟ್ಟಂತೆ ಪ್ರಸ್ತಾವನೆ KSRSAC ರವರು ನಿರ್ದೇಶಕರು, ಇ-ಆಡಳಿತದವರಿಗೆ ನೀಡುವುದು.

    **ಕ್ರಮ: ನಿರ್ದೇಶಕರು, KSRSAC**

11. ಉಳಿದ ಜಿಲ್ಲೆಯಲ್ಲಿ ಆಸ್ತಿಗಳ ಸಂಪೂರ್ಣ ಮಾಹಿತಿಯನ್ನು ಕರಾರುವಕ್ಕಾಗಿ ದಾಖಲಿಸಲು manual ಸಮೀಕ್ಷೆ ಅನ್ನು KEONICS ಅಥವಾ ಬೇರೆ ಸಂಸ್ಥೆಯನ್ನು ಗುರುತಿಸಿ ಅವುಗಳ ಮೂಲಕ manual ಸಮೀಕ್ಷೆ ಅನ್ನು ಗ್ರಾಮ ಪಂಚಾಯತ್‌ಗಳಲ್ಲಿ ಕೈಗೊಳ್ಳಲು ತೀರ್ಮಾನಿಸಲಾಯಿತು.

    **ಕ್ರಮ: ನಿರ್ದೇಶಕರು, ಪಂ.ರಾಜ್-1.**

.....3

d:\jg_2019\proceeding_2019\polygon.docx

301



**ಇತರ ವಿಷಯಗಳು:**

1. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಿಂದ ಅನುಷ್ಠಾನವಾದ R.O plants ಗಳನ್ನು Geo tag ಮಾಡಲು KSRSAC ರವರಿಂದ ವಿನ್ಯಾಸಗೊಂಡ Mobile app ನ್ನು ಬಳಸುವುದು ಹಾಗೂ R.O plants ಗಳನ್ನು ಗ್ರಾಮ ಪಂಚಾಯತ್‌ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಂದ Geo tag ಮಾಡಿಸುವುದು.
2. KSRSAC ರವರು ಗ್ರಾಮ ಪಂಚಾಯತ್ Boundary ಗಳನ್ನು ಅಂತಿಮಗೊಳಿಸಲು KSRSAC ನವರು ತಂತ್ರಾಂಶವನ್ನು ವಿನ್ಯಾಸಗೊಳಿಸಿದ್ದು, ತಂತ್ರಾಂಶವನ್ನು ಬಳಸಿಕೊಂಡು ಗ್ರಾಮ ಪಂಚಾಯತ್‌ನ್ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ್ Boundary ಅನ್ನು ಅಂತಿಮಗೊಳಿಸಿ ಹಾಗೂ ಸಂಬಂಧಪಟ್ಟ ಕಾರ್ಯನಿರ್ವಹಣಾಧಿಕಾರಿಗಳು ದೃಡೀಕರಣ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಸಂ:ಗ್ರಾಅಪ/14/ಗ.ಕೋಶ/2018
ದಿನಾಂಕ:30.03.2019

4.04.2019

(ಎಲ್.ಕೆ.ಅತೀಕ್, ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ನಿರ್ದೇಶಕರು, ಪಂ.ರಾಜ್-1, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
2. ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, (KSRSAC), ಬೆಂಗಳೂರು.
3. ಉಪಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್.
4. ಶ್ರೀ ಪಿ.ಎಸ್.ಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
5. ಶ್ರೀ ಸಮರ್ಥರಾಮ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
6. ಶ್ರೀ ಪ್ರಶಾಂತ್, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
7. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಬೆಂಗಳೂರು ಉತ್ತರ, ಬೆಂಗಳೂರು ನಗರ.
8. ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, (KSRSAC), ಬೆಂಗಳೂರು.
9. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ರಾಜಾನುಕುಂಟೆ ಮತ್ತು ಚಿಕ್ಕಬಾಣಾವರ ಗ್ರಾಮ ಪಂಚಾಯತ್, ಬೆಂಗಳೂರು ಉತ್ತರ, ಬೆಂಗಳೂರು ನಗರ.
10. ಶ್ರೀ ನಿತಿನ್ ನಾಯ್ಕ್, ಪ್ರೋಗ್ರಾಮರ್, ಎನ್.ಐ.ಸಿ, ಬೆಂಗಳೂರು.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.
2. ಸಹಾಯಕ ನಿರ್ದೇಶಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.
3. ರಾಜ್ಯ ಯೋಜನಾ ವ್ಯವಸ್ಥಾಪಕರು, ಇ-ಪಂಚಾಯತ್, ಗ್ರಾಅಪ ಇಲಾಖೆ, ಬೆಂಗಳೂರು.
4. ತಾಂತ್ರಿಕ ಸಮಾಲೋಚಕರು, ಇ-ಪಂಚಾಯತ್, ಗ್ರಾಅಪ ಇಲಾಖೆ, ಬೆಂಗಳೂರು.